**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.**

**ಸಿ.ಸಿ. ಸಂಖ್ಯೆಃ 84/2025**

| **ಪಿರ್ಯಾಧಿಃ** | **ವಿರುದ್ಧ** | **ಆರೋಪಿಃ** |
|---|---|---|
| ಶಿರಾ ಪೊಲೀಸ್ | | ಪ್ರವೀಣ್ ಎಂ.ಕೆ |

**ಆ ರೋ ಪ ಣೆ**

ದಿನಾಂಕ 29-10-2023 ರಂದು ಬೆಳಗಿನ ಜಾವ 4.30 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-51-ಎನ್-8159 ನೇ ಮಾರುತಿ ಸುಜುಕಿ ಕಾರಿನಲ್ಲಿ ತನ್ನ ಹೆಂಡತಿ ಯಮುನಾ ಮತ್ತು ಅತ್ತೆ ಸಣ್ಣಮ್ಮ , ಮಾವ ದೊಡ್ಡಣ್ಣರವರನ್ನು ಕೂರಿಸಿಕೊಂಡು ಧರ್ಮಸ್ಥಳಕ್ಕೆ ಹೋಗುತ್ತಿದ್ದು, ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿರುತ್ತೀರೆಂದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 279 ರಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರೆಂದು ನಿಮ್ಮ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಕಾರನ್ನು ಕೆರೆಗೆ ಬೀಳಿಸಿ ಅಪಘಾತ ಪಡಿಸಿದ ಪರಿಣಾಮ ಕಾರಿನಲ್ಲಿದ್ದ ಯುಮುನಾ , ಸಣ್ಣಮ್ಮ ಮತ್ತು ದೊಡ್ಡಣ್ಣ ರವರಿಗೆ ಕೈ ಕಾಲುಗಳಿಗೆ ಪೆಟ್ಟುಗಳು ಬಿದ್ದು ನೀರಿನಲ್ಲಿ ಮುಳುಗಿದ್ದು, ಉಸಿರುಗಟ್ಟಿ ಮೃತಪಟ್ಟಿರುತ್ತಾರೆಂದು, ಆ ಮೂಲಕ ನೀವು ಭಾ.ದಂ.ಸಂ. ಕಲಂ 304(ಎ) ರಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರೆಂದು ನಿಮ್ಮ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಆರೋಪಿಯಾದ ನೀವು ನಿಮ್ಮ ವಾಹನಕ್ಕೆ ಚಾಲನಾ ಪರವಾನಗಿಯನ್ನು ಪಡೆಯದೇ ಚಾಲನೆ ಮಾಡಿರುತ್ತೀರೆಂದು, ಆ ಮೂಲಕ ನೀವು ಕಲಂ 181 ಆಫ್ ಐ ಎಂ ವಿ ಆಕ್ಟ್ ರ ಅಡಿಯಲ್ಲಿ ಅಪರಾಧವನ್ನು ಮಾಡಿರುತ್ತೀರೆಂದು ನಿಮ್ಮ ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**ಪ್ರಶ್ನೆಃ** ನಿಮಗೆ ಓದಿ ಹೇಳಿದ ಅಪಾದನೆ ಅರ್ಥವಾಯಿತೇ?

**ಉತ್ತರಃ**

**ಪ್ರಶ್ನೆಃ** ನಿಮ್ಮ ಮೇಲೆ ಮಾಡಿರುವ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರೋ?

**ಉತ್ತರಃ**

(ಈ ಮೇಲಿನ ಆರೋಪಣೆಯನ್ನು ಆರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿದ ನಂತರ ಆರೋಪಿತ ನನ್ನ ಸಮಕ್ಷಮದಲ್ಲಿ ನೀಡಿದ ಉತ್ತರವನ್ನು ಯಥಾ ಪ್ರಕಾರವಾಗಿ ದಾಖಲು ಮಾಡಿಕೊಳ್ಳಲಾಯಿತು.)

ದಿನಾಂಕಃ

(ಝುರೀಫಾ ಬಾನು. ಎ.ಆರ್)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಶಿರಾ.